ಉ) ರೈತರಿಗೆ ಆಗಿರುವ ತೊಂದರೆಯನ್ನು ನಿವಾರಣೆ ಮಾಡಲು ಬೇಕಾದ ಸಮಯವೆಷ್ಟು

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು

ಆ) ಈ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ ಗುತ್ತಿಗೆದಾರರಿಗೆ (ದೀಪಕ್ ಕೇಬಲ್ಸ್ ಬೆಂಗಳೂರು) ವಹಿಸಿಕೊಡಲಾಗಿದೆ ಸದ್ಯದಲ್ಲಿಯೇ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು

ಇ) ನಿಜ

ಈ) ಸದರಿ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಗುತ್ತಿಗೆದಾರರಿಗೆ ಈಗಾಗಲೇ ಸೂಚನೆ ನೀಡಲಾಗಿದೆ

ಉ) ಕಾಮಗಾರಿಯು ಪ್ರಾರಂಭಗೊಂಡ ನಂತರ ಸುಮಾರು 3 ತಿಂಗಳುಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ

ಗುಂಡ್ಲುಪೇಟೆ ಕ್ಷೇತ್ರದ ಗೋಪಾಲಪುರ ಗ್ರಾಮದ ಬಳಿ ಕೆರೆ ನಿರ್ಮಾಣ ಕಾರ್ಯ ಮಾಡುವ ಬಗ್ಗೆ

51 (01) ಶ್ರೀ ಮಹಾದೇವ ಪ್ರಸಾದ್ ಹೆಚ್ ಎಸ್ (ಗುಂಡ್ಲುಪೇಟೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕು ಗೋಪಾಲಪುರ ಗ್ರಾಮದ ಬಳಿ ಕೆರೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ ಹಾಗಿದ್ದರೆ ಯಾವ ಸಾಲಿನಲ್ಲಿ ಕೆಲಸ ಪ್ರಾರಂಭಿಸಲಾಯಿತು

ಆ) ನಿರ್ಮಾಣ ಕಾರ್ಯ ವಿಳಂಬವಾಗಲು ಕಾರಣವೇನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಗುಂಡ್ಲುಪೇಟೆ ತಾಲ್ಲೂಕು ಗೋಪಾಲಪುರ ಗ್ರಾಮದ ಬಳಿ ಕೆರೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ 1999–2000ನೇ ಸಾಲಿನಲ್ಲಿ ಕೆಲಸ ಪ್ರಾರಂಭಿಸಲಾಯಿತು

ಆ) ಸದರಿ ಕಾಮಗಾರಿಯನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ 01 07 1999ರಂದು ವಹಿಸಿಕೊಡಲಾಗಿತ್ತು ನಿಗಮದ ವತಿಯಿಂದ 16 00 ಲಕ್ಷ ರೂ ಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಮುಚ್ಚಲು ತೀರ್ಮಾನ ಕೈಗೊಂಡಿರುವ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಹಿಂದಕ್ಕೆ ಪಡೆದು ಉಳಿಕೆ ಕೆಲಸಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸ್ವೀಕೃತಿಯಾಗಿರುತ್ತದೆ 2003–04ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 1702 ರಡಿಯಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವ ಕಾರಣ ಟೆಂಡರ್‌ಗೆ ಅನುಮೋದನೆ ನೀಡಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ಕಾಮಗಾರಿಯು ವಿಳಂಬವಾಗಿರುತ್ತದೆ ಅನುದಾನ ಲಭ್ಯವಾದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು

ಮಲೆನಾಡು ಅಭಿವೃದ್ಧಿ ನಿಗಮದ ಕಾಮಗಾರಿಯ ಬಗ್ಗೆ

52 (02) ಶ್ರೀ ಮಹಾದೇವ್ ಪ್ರಸಾದ್ ಹೆಚ್ ಎಸ್ (ಗುಂಡ್ಲುಪೇಟೆ) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ನಿಗಮದಿಂದ ಇದುವರೆಗೆ ಪಾವತಿಸಬೇಕಾದ ಬಾಕಿ ಹಣವೆಷ್ಟು ಜಿಲ್ಲಾವಾರು ವಿವರ ನೀಡುವುದು